ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಪತ್ರಕರ್ತರಿಗೆ ನಿವೇಶನ.

3426(4496) ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಈ ಹಿಂದೆ ಪತ್ರಕರ್ತರಿಗೆ ನಿವೇಶನ ನೀಡಲು ತೀರ್ಮಾನಿಸಿದ್ದುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಈ ವಿಚಾರ ಈಗ ಯಾವ ಹಂತದಲ್ಲಿದೆ (ವಿವರ ನೀಡುವುದು);

ಇ) ಪತ್ರಕರ್ತರಿಗೆ ನಿವೇಶನ ನೀಡುವ ವಿಚಾರದಲ್ಲಿ ವಿಳಂಬವಾಗಿರುವುದಕ್ಕೆ ಕಾರಣಗಳೇನು;

ಈ) ಯಾವಾಗ ಇವರುಗಳಿಗೆ ನಿವೇಶನ ನೀಡಬಹುದು;

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :—

ಅ), ಆ) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಅಂತಹ ಠರಾವು ಗೊಳಿಸಿದ್ದುದು ನಿಜ. ಆಂದರೆ, ಪತ್ರಕರ್ತರಿಗೆ ಪ್ರತ್ಯೇಕವಾಗಿ ನಿವೇಶನ ಹಂಚಿಕೆ ಮಾಡಲು ಜಾರಿಯಲ್ಲಿರುವ ನಿಯಮಾವಳಿಗಳಲ್ಲಿ ಅವಕಾಶವಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಮೈಸೂರು ನಗರದಲ್ಲಿನ ಆಸ್ತಿ ತೆರಿಗೆ ಪರಿಷ್ಕರಣೆ.

3427(4153) ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೈಸೂರು ನಗರದಲ್ಲಿ ಆಸ್ತಿ ತೆರಿಗೆ ಪರಿಷ್ಕರಣೆ ಬಗ್ಗೆ ನಾಗರೀಕರಿಂದ ಎಷ್ಟು ಆಕ್ಷೇಪಣೆ ಅರ್ಜಿಗಳು ಬಂದಿದೆ, ಯಾವ ಯಾವ ಪ್ರದೇಶಗಳಿಂದ ಯಾವ ಯಾವ ಅಳತೆಯ ಆಸ್ತಿಗಳಿಂದ ಬಂದಿರುವ ಆಕ್ಷೇಪಣೆ ಅರ್ಜಿಗಳ ಸಂಖ್ಯೆ ಎಷ್ಟು?

ಆ) ಈ ಅರ್ಜಿಗಳಲ್ಲಿನ ಅಂಶಗಳನ್ನು ಗಮನಿಸಿ ಹಾಲಿ ಹಂತದಲ್ಲಿ ಯಾವ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :—

ಅ) ಆಸ್ತಿ ತೆರಿಗೆ ಪರಿಷ್ಕರಣೆ ಬಗ್ಗೆ ಒಟ್ಟು 17,300 ಆಕ್ಷೇಪಣೆ ಅರ್ಜಿಗಳು ಬಂದಿರುತ್ತದೆ.

20 x 30, 30 x 40, 40 x 60, ಮತ್ತು 50 x 80 ಇತ್ಯಾದಿ ಅಳತೆಯ ಆಸ್ತಿಗಳಿಂದ ಬಂದಿರುತ್ತದೆ. ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಚಾಮರಾಜ ಮೊಹಲ್ಲಾ	4,659
ದೇವರಾಜ 1 ಮತ್ತು 2	913
ದೇವರಾಜ 3 ಮತ್ತು 4	2,756
ಮಂಡಿಮೊಹಲ್ಲಾ	2,244
ಲಷ್ಕರ್	2,155
ನಜರ್‌ಬಾದ್	1,403
ಕೆ.ಆರ್ ಮೊಹಲ್ಲಾ	1,642
ಎಲ್ಲೆ ಮೊಹಲ್ಲಾ	1,528

ಆ) ಈ ಅರ್ಜಿಗಳಲ್ಲಿ ಅಂಶಗಳನ್ನು ಗಮನಿಸಿ ಆಕ್ಷೇಪಣೆದಾರರಿಗೆ ಸ್ವಯಂಕರ ನಿರ್ಧಾರ ಕೈಪಿಡಿಯಂತೆ ಆಸ್ತಿ ತೆರಿಗೆಯನ್ನು ನಿಗಧಿಪಡಿಸಿಕೊಳ್ಳಲು ಪತ್ರಿಕೆಗಳಲ್ಲಿ ಪ್ರಚಾರಪಡಿಸಲಾಗಿದೆ.

ರಾಜ್ಯದ ನಗರಗಳ ಅಭಿವೃದ್ಧಿ.

3431(4511) ಶ್ರೀ ಎಸ್. ಶಿವಣ್ಣ (ತುಮಕೂರು) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ರಾಜ್ಯದಲ್ಲಿ ಕೆಯುಐಡಿಎಫ್‌ಸಿ ನಿಯಂತ್ರಣದಲ್ಲಿ ಎಷ್ಟು ನಗರಗಳನ್ನು ಎ.ಡಿ.ಬಿ. ವತಿಯಿಂದ ನೀಡಲಾಗಿರುವ ಹೇರಿನಲ್ಲಿ ಅಭಿವೃದ್ಧಿ ಪಡಿಸಲು ಯೋಜಿಸಲಾಗಿದೆ. ಅವುಗಳು ಯಾವುವು, ಯೋಜನಾ ವೆಚ್ಚವೆಷ್ಟು

2. ಆಯ್ಕೆಯಾದ ನಿಗದಿಗಳ ಕಾಮಗಾರಿಗಳಿಗೆ ನಿಗಧಿಗೊಳಿಸಿದ ಅವಧಿ ಎಷ್ಟು?

3. ಅವಧಿಯೊಳಗೆ ಕಾಮಗಾರಿ ಪೂರೈಸದ ಅಧಿಕಾರಿಗಳ ಮತ್ತು ಗುತ್ತಿಗೆದಾರರ ಮೇಲೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ ಕ್ರಮ ಕೈಗೊಳ್ಳದಿದ್ದರೆ ಕಾರಣಗಳೇನು?

4. ಈ ಯೋಜನೆಯಡಿ ತುಮಕೂರು ನಗರದಲ್ಲಿ ತೆಗೆದುಕೊಂಡಿರುವ ಕಾಮಗಾರಿಗಳನ್ನು ಯೋಜನೆವಾರು ಮತ್ತು ಕಾಮಗಾರಿವಾರು ಮಾಹಿತಿ ಒದಗಿಸುವುದು.

5.ಈ ಅಭಿವೃದ್ಧಿ ಯೋಜನೆಗಳಿಗೆ ನೀಡಿರುವ ಹಣ ಸಾಲವೇ ಸಾಲ ಮರುಪಾವತಿಸಲು ನೀಡಲಾಗಿರುವ ಅವಧಿ ಎಷ್ಟು ಸಾಲ ಮರು ಪಾವತಿ ಪ್ರಾರಂಭವಾಗುವುದು ಯಾವಾಗ? ಸಾಲ ಮರುಪಾವತಿಗೆ ಸ್ಥಳೀಯ ಸಂಸ್ಥೆಗಳು ಹಣದ ಕ್ರೋಢೀಕರಣಕ್ಕೆ ಹಮ್ಮಿಕೊಂಡಿರುವ ಯೋಜನೆಗಳಾವುವು?